**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 369/2022</u>**

**ಚಾ.ಸಾ - 5**

**ಪ್ರಾ.ಸಾ- 3**

**ಸಾಕ್ಷಿಗೆ ದಿನಾಂಕ 30-08-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಬಸಣ್ಣಗೌಡ |
| ತಂದೆಯ ಹೆಸರು | ಃ | ದೇವಿಂದ್ರಪ್ಪ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಪೊಲೀಸ್ ಪೇದೆ, ಗೋಗಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಶಹಾಪೂರ |

**<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ:</u>**

ನಾನು 2018 ರಿಂದ 2023ವರೆಗೆ ಜೇವರ್ಗಿ ಪೋಲಿಸ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17-03-2022ರಂದು ರಾತ್ರಿ 11 ಗಂಟೆಗೆ ನಾವು ಠಾಣೆಯಲ್ಲಿದ್ದಾಗ ಚಾಸಾ-1ರವರು ಮತ್ತು ಚಾಸಾ-4ರವರ ಜೊತೆಗೆ ರಾತ್ರಿ ಗಸ್ತು ಮತ್ತು ಚೆಕಿಂಗ್ ಕರ್ತವ್ಯ ಕುರಿತು ನಮ್ಮ ಠಾಣೆಯ ಜೀಪ್ ನಂ.ಕೆಎ-32 ಜಿ-0671 ನೇದ್ದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ದಿನಾಂಕ 18-03-2022 ರಂದು ರಾತ್ರಿ 01-00 ಎ.ಎಂ. ಗೆ ಸಿಂದಗಿ ಕ್ರಾಸ್ ಹತ್ತಿರ ಇದ್ದಾಗ ಚಾಸಾ-1ರವರು ಜೇವರ್ಗಿ ಪಟ್ಟಣದ ರದ್ದೆವಾಡಗಿ ಪೆಟ್ರೋಲ್ ಪಂಪ್ ಹತ್ತಿರದ ಸಾರ್ವಜನಿಕ ಸ್ಥಳದಲ್ಲಿ ರಮೇಶ ತೇಲ್ಕೂರ ಎಂಬ ವ್ಯಕ್ತಿಯು ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದು ದಾಳಿಯ ಕಾಲಕ್ಕೆ ಜೊತೆಯಲ್ಲಿ ಇರಬೇಕು ಎಂದು ಚಾಸಾ-1ರವರು ನಮಗೆ ತಿಳಿಸಿದರು. ನಂತರ 01-30 ಎ.ಎಂ. ಠಾಣೆಗೆ ಹೋಗಿ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಚಾರ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡಿರುತತಾರೆ. ನಾವು ಠಾಣೆಯಿಂದ ರಾತ್ರಿ 01-30 ಎ.ಎಂ. ಗಂಟೆಗೆ ಜೀಪ್ ನಂ.ಕೆಎ-32 ಜಿ-0671 ನೇದ್ದರಲ್ಲಿ ಪಂಚರ ಜೊತೆಗೆ , ಚಾಸಾ-1 ಮತ್ತು 4 ರವರು ಘಟನಾ ಸ್ಥಳಕ್ಕೆ ಹೊರಟೆವು. ಜೇವರ್ಗಿ ಪಟ್ಟಣದ ಬಸ್ ಸ್ಟ್ಯಾಂಡ್ ಹತ್ತಿರ ರೆದ್ದವಾಡಗಿ ಪೆಟ್ರೋಲ್ ಪಂಪ್ ಹತ್ತಿರ ನಡೆದುಕೊಂಡು ಹೋಗಿ ಒಂದು ಗೋಡೆಯ ಮರೆಯಲ್ಲಿ ನಿಂತು ನೋಡಲಾಗಿ ರೆದ್ದವಾಡಗಿ

ಪೆಟ್ರೋಲ್ ಪಂಪ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿಯು ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ರಾತ್ರಿ 2 ಗಂಟೆಗೆ ದಾಳಿ ಮಾಡಿದಾಗ ಮದ್ಯವನ್ನು ಖರೀದಿ ಮಾಡುತ್ತಿದ್ದ ಜನರು ಮತ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿಯು ಅಲ್ಲಿಂದ ಓಡಿಹೋದರು. ಆಗ ಚಾಸಾ-1, 4 ಮತ್ತು ನಾನು ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದು ಚಾಸಾ-1ರವರು ವಿಚಾರಿಸಲಾಗಿ ಅವನ ಹೆಸರು ರಮೇಶ ತೇಲ್ಕೂರ ಅಂತಾ ತಿಳಿಸಿದ್ದು ಅವನ ಹತ್ತಿರ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆ ಇರಲಿಲ್ಲ. ಪಂಚರ ಸಮಕ್ಷಮ ಮದ್ಯದ ಪೌಚುಗಳನ್ನು ಪರಿಶೀಲನೆ ಮಾಡಲಾಗಿ 48 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ. ಒಂದು ಪೌಚನ ಮುಖಬೆಲೆಯು ರೂ.35/- ಇತ್ತು. 180 ಎಂ.ಎಲ್.ನ 40 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ. ಸದರಿ ಪೌಚನ ಮುಖಬೆಲೆಯು ರೂ.70/- ಇತ್ತು. 90 ಎಂ.ಎಲ್.ನ 52 ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ. ಅವುಗಳ ಮುಖ ಬೆಲೆಯು ರೂ.68/-, 180 ಎಂ.ಎಲ್.ನ 30 ವಿಸ್ಕಿಯ ಪೌಚುಗಳು, 90 ಎಂ.ಎಲ್.ನ 40 ರಮ್, 180 ಎಂ.ಎಲ್.ನ 20 ರಮ್, 500 ಎಂ.ಎಲ್.ನ 20 ಕಿಂಗ್ ಫಿಷರ್ ಸ್ಟ್ರಾಂಗ್ ಪ್ರೀಮಿಯಂ ಟಿನ್ ಜಪ್ತಿಪಡಿಸಿಕೊಂಡಿರುತ್ತೇವೆ. ಎಲ್ಲಾ ಪೌಚುಗಳನ್ನು ಹಾಗೂ ಟಿನ್ ಗಳನ್ನು ಬಿಳಿ ಬಟ್ಟೆಯಲ್ಲಿ ಸೀಲ್ ಮಾಡಿ ಅವುಗಳ ಮೇಲೆ 'ಅ' ಎಂಬ ಅಕ್ಷರವನ್ನು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ. ಮುದ್ದೆಮಾಲು ಮತ್ತು ಆರೋಪಿಯನ್ನು ಮುಂದಿನ ಕ್ರಮಕ್ಕಾಗಿ SHO ರವರಿಗೆ ಒಪ್ಪಿಸಿರುತ್ತೇವೆ. ಈ ಕುರಿತು ನಾನು ಹೇಳಿಕೆಯನ್ನು ನೀಡಿರುತ್ತೇನೆ.

ಸದರಿ ಪೌಚುಗಳನ್ನು ಮತ್ತು ಟಿನ್ನುಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಸದರಿ ಮುದ್ದೆಮಾಲುಗಳನ್ನು ಎಂ.ಒ.-1 ರಿಂದ 250 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೆನೆ. ಈ ದಿನ ಆರೋಪಿತರು ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದರಿಂದ ಆರೋಪಿತರನ್ನು ಗುರುತಿಸಲು ಆರೋಪಿತರ ಪರ ವಕೀಲರಿಂದ ತಕರಾರು ಇರಲಿಲ್ಲ.

**ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ವೈ. ವಕೀಲರಿಂದಃ**

ಮೊದಲು ಮಹೇಶ ಪಂಚನು ಬಂದ ನಂತರ ಮಲ್ಲಿಕಾರ್ಜುನ ಪಂಚನು ಬಂದಿರುತ್ತಾರೆ. ನೀವು ಯಾವ ಗೋಡೆಯ ಮರೆಯಲ್ಲಿ ನಿಂತು ನೋಡಿರುತ್ತೀರಿ ಎಂದರೆ ಯಾವ ಗೋಡೆ ಎಂದು ಗೊತ್ತಿಲ್ಲ. ನೀವು ಗೋಡೆಯ ಮರೆಯಲ್ಲಿ ನಿಂತಿದ್ದಂತಹ ಜಾಗದಿಂದ ಆರೋಪಿ ಮದ್ಯ ಮಾರಾಟ ಮಾಡುತ್ತಿದ್ದಂತಹ ಜಾಗಕ್ಕೆ ಎಷ್ಟು ಅಂತರ ಇತ್ತು ಎಂದರೆ 20 ಮೀಟರ್ ಎಂದು ಉತ್ತರಿಸುತ್ತಾರೆ. ದಾಳಿ ಮಾಡುವ ಸಮಯದಲ್ಲಿ ಅಲ್ಲಿ ಎಷ್ಟು ಜನರಿದ್ದರು ಎಂದರೆ 5-6 ಜನರು ಇದ್ದರು ಎಂದು ಉತ್ತರಿಸುತ್ತಾರೆ. ಸದರಿ ಮುದ್ದೆಮಾಲುಗಳನ್ನು ಜಪ್ತಿಪಡಿಸಿಕೊಳ್ಳುವ ಸಮಯದಲ್ಲಿ ಹಣ ಏನಾದರೂ ಸಿಕ್ಕಿತಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ರಾತ್ರಿ ದಾಳಿ ಮಾಡಿದಾಗ ಆರೋಪಿ ರಮೇಶ ಮದ್ಯ ಮಾರಾಟ ಮಾಡುತ್ತಿದ್ದ ಎಂದು ಸುಳ್ಳು

ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿ ಸದರಿ ಮುದ್ದೆಮಾಲುಗಳನ್ನು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ರಮೇಶನಿಗೆ ವಶಪಡಿಸಿಕೊಂಡಾಗ ಎಷ್ಟು ಜನರಿದ್ದರು ಎಂದರೆ ಯಾರು ಇರಲಿಲ್ಲ ಎಂದು ಉತ್ತರಿಸುತ್ತಾರೆ. ರದ್ದೇವಾಡಗಿ ಪೆಟ್ರೋಲ್ ಪಂಪ್ ಹತ್ತಿರ ಸಾಮಾನ್ಯವಾಗಿ ಸಾಕಷ್ಟು ಜನರು ಇರುತ್ತಾರೆ ಎಂದರೆ ರಾತ್ರಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಆರೋಪಿಗೂ ಮತ್ತು ಈ ಘಟನೆಗೂ ಸಂಬಂಧ ಇಲ್ಲದಿದ್ದರೂ ಸಹ ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ